**ಚಾಸಾ-06**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆ:** 5015/2022 ಫ್ರಾಸಾ-06
ಚಾಸಾ-06

ದಿನಾಂಕಃ 16-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಶ್ವೇತಾ |
| **ತಂದೆಯ / ಗಂಡನ ಹೆಸರು** | ದೇವರಾಜು |
| **ವಯಸ್ಸು** | 25 |
| **ಉದ್ಯೋಗ** | ಹೂವಿನ ವ್ಯಾಪಾರ |
| **ವಾಸಸ್ಥಳ** | ಬಂಡಿಪಾಳ್ಯ |

**<u>ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-</u>**

ಮೃತ ರಮೇಶ , ಆರೋಪಿ ರಾಮಯ್ಯ ನನಗೆ ಗೊತ್ತು. ದಿ.01.02.2022 ರಂದು ಮದ್ಯಾಹ್ನ 3-30 ಗಂಟೆಗೆ ನಾನು ನಮ್ಮ ಮನೆಯ ಮುಂಭಾಗದಲ್ಲಿ ಹೂ ಕಟ್ಟುತ್ತಿದ್ದಾಗ ಹನುಮಂತರಾಯಪ್ಪ ರವರ ಮನೆ ಹಿಂಭಾಗದಲ್ಲಿ ಗಲಾಟೆ ಕೇಳಿ ಬಂತು, ಸದರಿ ಶಬ್ದ ಕೇಳಿ ನಾನು ಅಲ್ಲಿಗೆ ಹೋಗಿ ನೋಡಿದಾಗ ಹನುಮಂತರಾಯಪ್ಪನ ಮಗಳು ರಾಧಳನ್ನು ಹೊತುಕೊಂಡು ಹೋಗಿ ಮದುವೆ ಮಾಡಿಸುತ್ತಾರೆಂದು ಆರೋಪಿ ರಾಮಯ್ಯ ಬೈಯ್ಯುತ್ತಿದ್ದ. ಅದಕ್ಕೆ ರಮೇಶ ನೀನು ಎಲ್ಲರನ್ನು ಯ್ಯಾಕೆ ಬೈಯುತ್ತಿಯಾ ಸಂಬಂಧಪಟ್ಟವರೆ ಬೈಯಿ ಎಂದು ಹೇಳಿದ. ಅದಕ್ಕೆ ಆರೋಪಿ ನೀನೇ ಹೇಳಿದ್ದಿಯಾ ಬಡ್ಡಿಮಗನೇ ಎಂದು ಎರಡು ಏಟು ದೊಣ್ಣೆಯಿಂದ ತಲೆಯ ಹಿಂಭಾಗದಲ್ಲಿ ಮತ್ತು ಮುಂಭಾಗದಲ್ಲಿ ಹೊಡೆದು ನೂಕಿದ ಇದರಿಂದ ರಮೇಶ ಕುಸಿದು ಬಿದ್ದ. ನಾನು , ದಿನೇಶ್ , ನಾಗರಾಜು , ಲಕ್ಷ್ಮೀಕಾಂತ , ಪುಟ್ಟತಾಯಮ್ಮ , ಪುಟ್ಟಮ್ಮ ನೀರು ಕುಡಿಸಿ ಎತ್ತಿಕೊಂಡು ರಮೇಶ್ ನ ಮನೆ ಹತ್ತಿರ ಹೋಗಿರುತ್ತೇವೆ. ನಂತರ ಕಾರಿನಲ್ಲಿ ರಮೇಶನನ್ನು ತುಮಕೂರಿಗೆ ಕರೆದುಕೊಂಡು ಹೋಗಿರುತ್ತಾರೆ.

ನಂತರ ಬೆಂಗಳೂರಿಗೆ ಕರೆದುಕೊಂಡು ಹೋಗಿರುತ್ತಾರೆ. 4 ದಿನಗಳ ನಂತರ ತೀರಿಕೊಂಡಿರುತ್ತಾರೆಂದು ಗೊತ್ತಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ದೊಣ್ಣೆಯನ್ನು ನೋಡಿ ಗುರುತಿಸಿ ಸದರಿ ದೊಣ್ಣೆಯಿಂದಲೇ ಆರೋಪಿ ರಮೇಶನಿಗೆ ಹೊಡೆದಿರುತ್ತಾನೆ. ಮತ್ತು ನ್ಯಾಯಾಲಯದ ಮುಂದೆ ಇರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ. ರಮೇಶನ ಸಾವಿಗೆ ಆರೋಪಿಯೇ ಕಾರಣ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ.

**<u>ಪಾಟೀಸವಾಲು,ಶ್ರೀ. ವಿ.ಆರ್.ಆರ್. ವಕೀಲರಿಂದ ಆರೋಪಿ ಪರವಾಗಿ:-</u>**

ಮೃತ ರಮೇಶ ಮತ್ತು ರಾಮಯ್ಯ ಮದ್ಯೆ ಅಣ್ಣ ತಮ್ಮ ಸಂಬಂಧ ಇರುತ್ತದೆ. ಆರೋಪಿ ರಾಮಯ್ಯ ಮತ್ತು ಮೃತ ರಮೇಶನ ತಾಯಂದಿರು ಅಕ್ಕ ತಂಗಿಯರು ಎಂದರೆ ನಿಜ. ಮೃತ ರಮೇಶ ಮೂಲತಃ ತಿಪ್ಪನಹಳ್ಳಿಯವರು. ತಿಪ್ಪನಹಳ್ಳಿ ಗ್ರಾಮದಿಂದ ರಮೇಶನನ್ನು ಮತ್ತು ಆತನ ತಾಯಿಯನ್ನು ಆರೋಪಿ ತಾಯಿ ಕರೆದುಕೊಂಡು ಬಂದು ಬಂಡಿಪಾಳ್ಯದಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ತಾಯಿ ಮತ್ತು ಆತನ ಅಣ್ಣಂದಿರು ಮೃತ ರಮೇಶ ಮತ್ತು ಅವನ ತಾಯಿಯನ್ನು ತಿಪ್ಪನಹಳ್ಳಿಯಿಂದ ಬಂಡಿಪಾಳ್ಯಕ್ಕೆ ಕರೆದುಕೊಂಡು ಬಂದು ಜಾಗ ಕೊಡಿಸಿ , ಮನೆ ಕಟ್ಟಿಸಿ ಮತ್ತು ಅವನಿಗೆ ಮೃತ ರಮೇಶನಿಗೆ ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಮೇಶನ ಮಗನ ಹೆಸರು ಲಕ್ಷ್ಮೀಕಾಂತ ಅಲಿಯಾಸ್ ಕಾಂತರಾಜು. ಲಕ್ಷ್ಮೀಕಾಂತನನ್ನು ಬೆಳೆಸಿ ಓದಿಸಿರುವುದು ಆರೋಪಿ ಮತ್ತು ಆತನ ತಾಯಿ ಎಂದರೆ ಸರಿಯಲ್ಲ.

ಮೃತ ರಮೇಶ ನನ್ನ ಭಾವ. ನಮ್ಮ ಮನೆಯಿಂದ ಘಟನೆಯಾದ ಜಾಗಕ್ಕೆ ಅಂದಾಜು 15 ಮೀಟರ್ ಅಂತರ ಇರುತ್ತದೆ. ನಮ್ಮ ಮನೆಯಿಂದ ಘಟನೆಯಾದ ಜಾಗದ ಮದ್ಯೆ 3 ಮನೆಗಳು ಇರುತ್ತವೆ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸ್ಥಳಕ್ಕೆ ಹೋದಾಗ ಸುಮಾರು 10-12 ಜನ ಇದ್ದರು, ಅವರುಗಳೆಂದರೆ ದಿನೇಶ್ , ನಾಗರಾಜು , ಲಕ್ಷ್ಮೀಕಾಂತ , ಪುಟ್ಟತಾಯಮ್ಮ , ಪುಟ್ಟಮ್ಮ , ಹನುಮಂತರಾಯಪ್ಪ , ಜಯಮ್ಮ , ಮಂಜಮ್ಮ

ಮತ್ತು ಇತರರು ಇದ್ದರು. ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಹನುಮಂತರಾಯಪ್ಪ ಮಗಳ ಮದುವೆಯನ್ನು ಶಿವನಗರದ ಬಸಣ್ಣನ ಮಗ ನಾಗೇಶನನಿಗೆ ಮದುವೆ ಮಾಡಿಸಿಕೊಡಬೇಕು ಎನ್ನುವ ವಿಷಯವನ್ನು ನಾನು ಕೇಳಿಸಿಕೊಂಡಿರುತ್ತೇನೆ. ನಾನು ಘಟನೆಯಾದ ದಿನ ಊರಿನಲ್ಲಿ ಇರಲಿಲ್ಲ , ಯಾವುದೇ ಘಟನೆ ನೋಡಿರುವುದಿಲ್ಲ ಮತ್ತು ಏನನ್ನೂ ಕೇಳಿಕೊಂಡಿಲ್ಲವಾದರೂ ಮೃತ ರಮೇಶ ನನ್ನ ಗಂಡನ ಅಣ್ಣ ನಾಗಿರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಮಹಜರ್ ಗೆ ಬಂದಾಗ ತೆಗೆದುಕೊಂಡಿರುತ್ತಾರೆ. ಸದರಿ ಹೇಳಿಕೆಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ದೊಣ್ಣೆ ಹನುಮಂತರಾಯಪ್ಪ ರವರ ಮನೆ ಹತ್ತಿರ ಬಿದ್ದಿತ್ತು. ಹನುಮಂತರಾಯಪ್ಪ ರವರ ಮನೆಗೂ ಮತ್ತು ಘಟನೆ ನಡೆದ ಸ್ಥಳದ ಮಧ್ಯೆ 2 ಮನೆಗಳು ಇರುತ್ತವೆ. ನನ್ನ ಹೇಳಿಕೆಯಲ್ಲಿ ರಾಮಯ್ಯ ಹನುಮಂತರಾಯಪ್ಪ ರವರ ಮನೆ ಹತ್ತಿರ ಬಿದಿದ್ದತಹ ದೊಣ್ಣೆಯನ್ನು ತೆಗೆದುಕೊಂಡು ಬಂದು ಹೊಡೆದ ಎಂದು ಹೇಳಿ ಬರೆಸಿರುತ್ತೇನೆ.

ರಮೇಶನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಕಾರಿನ ನೊಂದಣಿ ನಂಬರ್ ಗೊತ್ತಿರುವುದಿಲ್ಲ. ಸದರಿ ಕಾರಿನಲ್ಲಿ ರಮೇಶನ ಜೊತೆ ದಿನೇಶ್ , ಲಕ್ಷ್ಮೀಕಾಂತ , ಪುಟ್ಟತಾಮಯ್ಯ ಮತ್ತು ನಾಗರಾಜು ಹೋಗಿರುತ್ತಾರೆ. ರಮೇಶನಿಗೆ ಮೂರ್ಛೆ ರೋಗ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ರಮೇಶ ಮೂರ್ಛೆ ರೋಗ ಕಾಯಿಲೆಗೆ ನಿಮಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದ ಎಂದರೆ ಸುಳ್ಳು. ಘಟನೆಯಾಗಿದೆ ಎಂದು ಹೇಳುವ ದಿನವೂ ರಮೇಶ ಮೂರ್ಛೆ ಹೋಗಿ ಬಿದಿದ್ದ ನಾವು ಮತ್ತು ಆರೋಪಿ ರಾಮಯ್ಯ ಆತನನ್ನು ಉಪಚರಿಸುವುದಕ್ಕೆ ಹೋಗಿದ್ದೇವು ಎಂದರೆ ಸರಿಯಲ್ಲ. ರಮೇಶ ನನ್ನು ಮನೆಗೆ ಕರೆದುಕೊಂಡು ಬಂದು ಸ್ನಾನ ಮಾಡಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸುಳ್ಳು. ಆರೋಪಿಗೆ ಕೊಲೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಾಮಯ್ಯನ ಅಣ್ಣನ ಹೆಸರು ಹನುಮಂತರಾಯಪ್ಪ ಮತ್ತು ನಾಗರಾಜು. ನಾಗರಾಜು ರವರು ನಮ್ಮ ಊರಿನ ಗ್ರಾಮ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು ಎನ್ನುವುದು ನಿಜ. ಆ ಸಮಯದಲ್ಲಿ ದಿನೇಶ್ , ರಮೇಶ್ , ಲಕ್ಷ್ಮೀಕಾಂತ , ನಾಗರಾಜು ರವರ ವಿರುದ್ಧ ಚುನಾವಣೆಯಲ್ಲಿ ಕೆಲಸ ಮಾಡಿರುತ್ತಾರೆ ಎಂದರೆ ಸುಳ್ಳು.

ಚುನಾವಣೆಯಲ್ಲಿ ನಾಗರಾಜುವಿನ ವಿರುದ್ಧ ದಿನೇಶ್ ರವರ ಗುಂಪು ಸೋತುಹೋಗಿರುತ್ತದೆ ಎಂದರೆ ನಿಜ. ಈ ಎಲ್ಲಾ ದ್ವೇಷದಿಂದ ನಾಗರಾಜು ಮತ್ತು ರಾಮಯ್ಯನನ್ನು ಮಟ್ಟಹಾಬೇಕೆಂದು ನಾನು ದಿನೇಶ್ ರವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದೊಣ್ಣೆಗೆ ಕೂಳೆ ಇರುತ್ತದೆ ಅದರಿಂದ ನಾನು ಗುರುತಿಸುತ್ತೇನೆ. ಆರೋಪಿ ಯಾವುದೇ ಉದ್ದೇಶಇಟ್ಟುಕೊಂಡು ರಮೇಶನನ್ನು ಹೊಡೆದಿಲ್ಲವಾದರೂ ನಾನು ಮೃತ ರಮೇಶ ನನ್ನ ಭಾವನಾಗಬೇಕಾಗಿರುವುದರಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**